ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ೩,೫೦೦ ರೂಪಾಯಿ ಹಣವನ್ನು ಪಂಚಾಯಿತಿಯವರು ಕಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೂ ಅದರ ಬಗ್ಗೆ ಪರೀಕ್ಷೆ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದರೆ ಹೇಗೆ?

ಶ್ರೀ ಕೆ. ಪ್ರಭಾಕರ್.—ಈಗ ನಮ್ಮ ಲೆಕ್ಕದಲ್ಲಿ ಕಟ್ಟಿಲ್ಲ ಎಂದು ಇದೆ. ಮಾನ್ಯ ಸದಸ್ಯರು ಕಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆದೂ ಫೆಬ್ರುವರಿ ತಿಂಗಳಿನಲ್ಲಿ ಎಂದು ಹೇಳುತ್ತಿದ್ದಾರೆ. ಈ ಪ್ರೊಸೆಸಿಂಗ್‌ನಲ್ಲಿ ಇನ್ನೂ ನಮ್ಮ ಲೆಕ್ಕದಲ್ಲಿ ಬಂದಿಲ್ಲ. ಆದ್ದರಿಂದ ಅದರ ಬಗ್ಗೆ ಪರೀಕ್ಷೆ ಮಾಡುತ್ತೇನೆ ಎಂದು ಹೇಳಿದ್ದು.

Filling up the Vacancies of Doctors in Primary Health Centres in Sagar Taluk.

351 SRI L.T. THIMMAPPA HEGDE (Sagar)—Will the Minister for Health and Family Welfare be pleased to state:—

(a) the number of vacant posts of Doctors in the Primary Health Centres and other Hospitals in Sagar Taluk (the details of Health Centres and its names may be furnished);

(b) whether it has come to the notice of Government that the people of the Rural areas have been put to hardship due to the non-posting of Doctors for so many months;

(c) the period within which the Doctors will be appointed and when ?

SRI M. MALLAPPA (Minister for Health and Family Welfare).—

(a) One post each (total two) in Kagodu and Thumari Primary Health Centres in Sagar Taluk are vacant.

(b) Yes.

(c) The vacant posts will be filled up after selection of Doctors by the Public Service Commission, or at the time of recruiting the Doctors temporarily.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಸ್ವಾಮಿ, ೩೫೧ನೇ ಪ್ರಶ್ನೆಯನ್ನು ಕೇಳುತ್ತೇನೆ.

† ಶ್ರೀ ಎಂ. ಮಲ್ಲಪ್ಪ.—ಅಧ್ಯಕ್ಷರೆ, ಮೊದಲನೇ ಉತ್ತರದಲ್ಲಿ ಕಾಗೋಡು ಮತ್ತು ತುಮರಿ ಎಂದು ಇದೆ. ಈಗ ಕಾಗೋಡಲ್ಲಿ ಡಾಕ್ಟರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಮೊದಲು ಕಾಗೋಡಲ್ಲಿ ಇರಲಿಲ್ಲ, ಈಗ ಬಂದಿದ್ದಾರೆ. ಈಗ ಒಂದು ಕಷ್ಟ ಏನು ಅಂದರೆ ಒಂದು ಕಡೆ ಬರುತ್ತಾರೆ, ಇನ್ನೊಂದು ಕಡೆ ಹೋಗುತ್ತಾರೆ. ಇವೊತ್ತು ಆರಳಗೋಡಿನಲ್ಲಿ ಇಲ್ಲ, ಸಾಗರ್‌ನಲ್ಲಿ ಇನ್ನೊಂದು ಕಡೆ ಇಲ್ಲ. ಇವೊತ್ತು ಡಾಕ್ಟರುಗಳು ಇಲ್ಲದೇ ಇರತಕ್ಕ ಆಸ್ಪತ್ರೆಗಳು ನನ್ನ ತಾಲ್ಲೂಕಿನಲ್ಲಿ ಇವೆ. ಅವೆಲ್ಲವನ್ನೂ ಎಷ್ಟು ಕಾಲದಲ್ಲಿ ಭರ್ತಿ ಮಾಡುತ್ತೀರಾ ಎನ್ನುವ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.

ಶ್ರೀ ಎಂ. ಮಲ್ಲಪ್ಪ:—ಈಗ ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ೩೫೦ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಡಾಕ್ಟರುಗಳನ್ನು ಒದಗಿಸುತ್ತಿದ್ದಾರೆ. ಈಗ ಸದ್ಯಕ್ಕೆ ನೆನ್ನೆಯ ದಿವಸ ೮೦ ಜನ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿದ್ದೇವೆ. ಆದ್ದರಿಂದ ಆದಷ್ಟು ಬೇಗ ಮಾಡುತ್ತೇವೆ. ಇವೊತ್ತು

ಬೀದರ್, ಗುಲ್ಬರ್ಗ, ಬಿಜಾಪುರ ಆ ಕಡೆಗಳಲ್ಲಿ ಲೇಡಿ ಡಾಕ್ಟರ್ ಮುಖಿ ನೋಡದೆ ಇರುವ ಆಸ್ಪತ್ರೆಗಳು ಇವೆ. ಆ ಕಡೆಗೆ ಮಾಡಿಕೊಟ್ಟು ನಂತರ ಈ ಕಡೆಗೂ ಮಾಡಿಕೊಡುತ್ತೇವೆ. ಇಪ್ಪೊತ್ತು ಶಿವಮೊಗ್ಗ ಜಿಲ್ಲೆಯಲ್ಲಿ ನಾಲ್ಕು ಜನ ಲೇಡಿ ಡಾಕ್ಟರುಗಳು ಬೇಕು, ಪುರುಷ ವೈದ್ಯರು ಬೇಕು ಅದನ್ನು ಭರ್ತಿ ಮಾಡುತ್ತೇವೆ. ಆದರೆ ಎಲ್ಲವನ್ನೂ ಒಂದೇ ಸಾರಿ ಭರ್ತಿ ಮಾಡುತ್ತೇವೆಂದು ಹೇಳಲಿಕ್ಕೆ ಆಗುವುದಿಲ್ಲ. ಬಹಳ ಹಿಂದುಳಿದ ಪ್ರದೇಶಗಳಿಗೆ ಈ ವೈದ್ಯಕೀಯ ಸೌಲಭ್ಯವನ್ನು ಕೊಡಬೇಕಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ನನ್ನ ಕ್ಷೇತ್ರ ಬಹಳ ಹಿಂದುಳಿದ ಪ್ರದೇಶ. ಶರಾವತಿ ಪ್ರದೇಶ, ಅಲ್ಲಿ ರೋಗ ಇದೆ, ಅಲ್ಲಿ ಡಾಕ್ಟರುಗಳು ಇಲ್ಲದೇ ಹೋದರೆ ಬಹಳ ಕಷ್ಟ ಇದೆ ಇಪ್ಪೊತ್ತು ಶರಾವತಿ ಮುಳುಗಡೆ ಪ್ರದೇಶದ ಕಡೆ ಮಾನ್ಯ ಆರೋಗ್ಯ ಮಂತ್ರಿಗಳು ಗಮನಹರಿಸಬೇಕು. ಇಪ್ಪೊತ್ತು ಆರಳಗೋಡಿಗೆ ಡಾಕ್ಟರನ್ನು ಕೊಡಬೇಕು.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ತಮ್ಮ ಕ್ಷೇತ್ರವನ್ನು ಹಿಂದುಳಿದಿದೆ ಎಂದು ನಾನು ತಿಳಿದು ಕೊಂಡಿಲ್ಲ ಅಲ್ಲಿಗೆ ಬೇಕಾದಷ್ಟು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಸಾಂಕ್ರಾಮಿಕ ರೋಗಗಳು ಗಣನೀಯವಾದ ಪ್ರಮಾಣದಲ್ಲಿ ಕಡಿಮೆಯಾಗಿದೆ ಅಂದಮೇಲೆ ಸೌಲಭ್ಯ ಹೆಚ್ಚು ಕೊಟ್ಟಿದ್ದೇವೆ ಎನ್ನುವ ಬಗ್ಗೆ ತಾವು ಒಪ್ಪಿಕೊಳ್ಳಲೇ ಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ೩೦೦ ಜನ ಸೆಲೆಕ್ಟ್ ಮಾಡಿದ್ದಾರೆಂದು ಹೇಳಿದರು. ಈಗ ಲೋಕಲ್ ಕ್ಯಾಂಡಿಡೇಟ್ಸ್ ನೇಮಕ ಮಾಡುತ್ತಿದ್ದಾರೆ ಇಪ್ಪೊತ್ತು ಮೆಡಿಕಲ್ ಗ್ರಾಜ್ಯುಯೇಟ್ಸ್ ಅನ್‌ಎಂಪ್ಲಾಯ್ಡ್ ಆಗಿದ್ದಾರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ಸೆಲೆಕ್ಟ್ ಆಗಿ ಬರತಕ್ಕದ್ದು ತಡವಾಗುತ್ತದೆ. ಆದುದರಿಂದ ಎಲ್ಲಾ ಕಡೆ ಲೋಕಲ್ ಕ್ಯಾಂಡಿಡೇಟ್ಸ್ ಫಿಲ್ ಆಪ್ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಈಗ ಲೋಕಲ್ ಕ್ಯಾಂಡಿಡೇಟ್ಸ್ ಏನು ನೇಮಕ ಮಾಡಿದ್ದೇವೆ ಆದರಲ್ಲಿ ಕೆಲವರು ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ಬರುತ್ತಾರೆ. ಅಂತಹ ಅಗತ್ಯವಿದೆ ಎನ್ನುವುದು ಕಂಡು ಬಂದರೆ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳುತ್ತೇವೆ. ಒಂದು ವರ್ಷದಿಂದ ೩೦೦ ಜನ ಸ್ಥಳೀಯ ಅಭ್ಯರ್ಥಿಗಳ ಮೂಲಕ ಈ ಸ್ಥಾನಗಳನ್ನು ಭರ್ತಿ ಮಾಡಲಾಗಿದೆ.

Claims for Compensation under workmen's Compensation Act

413 SRI B.V. KAKKILAYA (Vittal).—Will the Minister for Labour & Excise be pleased to state :—

(a) the number of claims for Compensation under Workmen's Compensation Act pending before the Asst. Commissioner, South Kanara District at the end of March 1977 ;

(b) the Number of such claims (i) enquired (ii) disposed awarding compensation, and (iii) rejected, in the year ending 31st March 1978 ;

(c) the Number of such claims preferred by workmen in the year ending 31st March 1978 and the toral number of claims pending (i) enquiry and (ii) disposal at the end of March 1978 ;

(d) the number of cases at the end of March 1978 in which the amount of compensation awarded had not actually been paid and the number of such cases in which proceedings for recovery of the amo